ಫ್ಯಾಕ್ಸ್ / Fax : 080-25586321
ಈಮೇಲ್ / E-mail : ho@kspcb.gov.in
ವೆಬ್‌ಸೈಟ್ / Website : http://kspcb.gov.in

25581383, 25589112
25588151, 25588270
25588142, 25586520

# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
# Karnataka State Pollution Control Board

"ಪರಿಸರಭವನ", 1 ರಿಂದ 5ನೇ ಮಹಡಿಗಳು, ನಂ.49, ಚರ್ಚ್‌ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ
"Parisara Bhavana", 1st to 5th Floor, # 49, Church Street, Bengaluru - 560 001, Karnataka, INDIA

ಪಿಸಿಬಿ/13/ ಎಮ್ ಎಸ್ ಡಬ್ಲು/2016 3132 ದಿನಾಂಕ; 01 SEP 2017

## ಸಾರ್ವಜನಿಕರಿಗಾಗಿ ಪ್ರಕಟಣೆ

ತೆರೆದ ಜಾಗದಲ್ಲಿ ಅದರಲ್ಲೂ ನಗರಪ್ರದೇಶದಲ್ಲಿ ಪ್ಲಾಸ್ಟಿಕ್ ತ್ಯಾಜ್ಯವೂ ಸೇರಿದಂತೆ ಘನ ತ್ಯಾಜ್ಯ ವಸ್ತುಗಳನ್ನು ಸುಡುವುದರಿಂದ ಅಪಾರ ಪ್ರಮಾಣದ ತೇಲಾಡುವ ಕಣಗಳು (Particulate Matter) ಜೊತೆಗೆ ಸಲ್ಫರ್ ಡೈ ಆಕ್ಸೈಡ್ ($SO_2$) ಕಾರ್ಬನ್ ಡೈ ಆಕ್ಸೈಡ್ ($CO_2$), ಕಾರ್ಬನ್ ಮಾನಾಕ್ಸೈಡ್ (CO), ಡಯಾಕ್ಸಿನ್ ಮತ್ತು ಫ್ಯೂರಾನ್ಸ್ ನಂತಹ ಹಾನಿಕಾರಕ ರಾಸಾಯನಿಕಗಳು ವಾತಾವರಣದಲ್ಲಿ ಸೇರ್ಪಡೆಗೊಂಡು ಮಾನವರನ್ನೊಳಗೊಂಡಂತೆ ಸಕಲ ಜೀವರಾಶಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದು ಸಂಶೋಧನೆಗಳಿಂದ ತಿಳಿದುಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ವಾಯು (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ, 1981 ರ ಕಲಂ 19 (5) ರಡಿಯಲ್ಲಿ ತಮಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯನ್ನು ಸೇರಿದಂತೆ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಹಾಗೂ ರಾಜ್ಯಾದ್ಯಂತ ಇರುವ ಘನತ್ಯಾಜ್ಯ ಉತ್ಪಾದಕ ಘಟಕಗಳಲ್ಲಿನ ತೆರೆದ ಜಾಗದಲ್ಲಿ ಮರಗಿಡಗಳ ರೆಂಬೆ ಮತ್ತು ಎಲೆಗಳೂ ಸೇರಿದಂತೆ ಯಾವುದೇ ರೀತಿಯ ಘನತ್ಯಾಜ್ಯಗಳನ್ನು ಸುಡುವುದನ್ನು ಈ ಮೂಲಕ ಸಂಪೂರ್ಣವಾಗಿ ನಿಷೇಧಿಸಿ ಅಧಿಸೂಚನೆ ಹೊರಡಿಸಿದೆ.

ಈ ಅಧಿಸೂಚನೆಯ ಉಲ್ಲಂಘನೆಯನ್ನು ವಾಯು (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ, 1981ರ ಉಲ್ಲಂಘನೆಯೆಂದು ಪರಿಗಣಿಸಿ ಸಕ್ಷಮ ಪ್ರಾಧಿಕಾರ ಕಾನೂನು ಕ್ರಮ ಜರುಗಿಸಲಾಗುವುದು.

ಸರ್ಕಾರದ ಅಧಿಸೂಚನೆ ಸಂಖ್ಯೆ : ಅಪಜೀ 06 ಇ ಎನ್ ವಿ 2017 ದಿನಾಂಕ: 03-08-2017 ನ್ನು ಲಗತ್ತಿಸಿದೆ.

ಸಹಿ/
ಸದಸ್ಯ ಕಾರ್ಯದರ್ಶಿ

ಹಿ ಪ ಅ (ತ್ಯಾ ನಿ ಕೋ)

<u>GOVERNMENT OF KARNATAKA</u>

No. FEE 6 ENG 2017

Karnataka Government Secretariat,
M.S. Building,
Bangalore, Dated:03.08.2017.

## NOTIFICATION

Research findings reveal that burning of solid waste including plastic in the open places especially in the urban areas releases harmful chemicals such as Sulpher Dioxide ($SO_2$) Carbon Dioxide ($CO_2$), Carbon Monoxide (CO), Dioxins and Furans in addition to lot of Particulate Matter which get into the environment and create serious health hazard on all living creatures including human beings.

The Karnataka State Pollution Control Board have submitted a proposal recommending for issue of a notification banning burning of solid waste including twigs, dry leaves and other wastes in open places of urban areas in accordance with section 19(5) of the Air (Prevention and Control of Pollution) Act, 1981 to prevent its ill-effect on the health of general public as concentration of the Particulate Matter is increasing in the urban areas because of burning of solid waste in open places.

Considering the recommendation made by the Karnataka State Pollution Control Board and in exercise of the powers conferred under section 19(5) of the Air (Prevention and Control of Pollution) Act, 1981, the State Government hereby impose a complete ban on burning of solid wastes of any kind including twigs and leaves of plants in open places within the jurisdiction of all urban local bodies including Bruhat Bengaluru Mahanagara Palike and in solid waste landfill sites throughout the State.

The competent authorities shall deal with violation of this notification if any, as violation of the provisions of the Air (Prevention and Control of Pollution) Act, 1981.

By Order & in the name of the
Governor of Karnataka,

**(H.C. Rajendra Kumar)**
Under Secretary to Government (I/c),
(Ecology and Environment)
Forest, Ecology and Environment Department

To:

The Compiler, Karnataka State Gazette – with a request to publish in the next issue and arrange to furnish 200 copies to this Department.

..2

**Copy to:**

1. The Accountant General (A&E), Karnataka, Bengaluru.
2. All the Additional Chief Secretaries and Principal Secretary/Secretaries to Government.
3. The Member Secretary, Karnataka State Pollution Control Board, "Parisara Bhavana, Church Street, Bengaluru - 560001.
4. The Commissioner, Bruhath Bengaluru Mahanagara Palike, N.R. Square, Bengaluru.
5. The Director, Directorate of Muncipal Administration, Bengaluru.
6. The Deputy Commissioners of all districts.
7. The Chief Executive Officers of Zilla Panchayats of all districts
8. The Commissioners/Chief Officers of all urban local bodies.
9. The P.S. to the Chief Secretary to Government, Vidhana Soudha, Bengaluru.
10. PS to Hon'ble Minister for Forest, Ecology and Environment, Vidhana Soudha, Bengaluru.
11. PS to Additional Chief Secretary to Government, Forest, Ecology and Environment Department, M. S. Building, Bengaluru.
12. Senior PS to Secretary to Government (Ecology & Environment), Forest, Ecology and Environment Department, M. S. Building, Bengaluru.
13. SGF / Spare Copies.

**ಕರ್ನಾಟಕ ಸರ್ಕಾರ**

ಸಂಖ್ಯೆ: ಅಪಜೀ 06 ಇಎನ್‌ಜಿ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:03.08.2017.

**ಅಧಿಸೂಚನೆ**

ತೆರೆದ ಜಾಗದಲ್ಲಿ ಅದರಲ್ಲೂ ನಗರಪ್ರದೇಶದಲ್ಲಿ ಪ್ಲಾಸ್ಟಿಕ್ ತ್ಯಾಜ್ಯವೂ ಸೇರಿದಂತೆ ಘನ ತ್ಯಾಜ್ಯ ವಸ್ತುಗಳನ್ನು ಸುಡುವುದರಿಂದ ಅಪಾರ ಪ್ರಮಾಣದ ತೇಲಾಡುವ ಕಣಗಳು (Particulate Matter) ಜೊತೆಗೆ ಸಲ್ಫರ್ ಡೈ ಆಕ್ಸೈಡ್ ($SO_2$), ಕಾರ್ಬನ್ ಡೈ ಆಕ್ಸೈಡ್($CO_2$), ಕಾರ್ಬನ್ ಮಾನಾಕ್ಸೈಡ್ (CO), ಡಯಾಕ್ಸಿನ್ಸ್ ಮತ್ತು ಫ್ಯೂರಾನ್ಸ್ ನಂತಹ ಹಾನಿಕಾರಕ ರಾಸಾಯನಿಕಗಳು ವಾತಾವರಣದಲ್ಲಿ ಸೇರ್ಪಡೆಗೊಂಡು ಮಾನವರನ್ನೊಳಗೊಂಡಂತೆ ಸಕಲ ಜೀವರಾಶಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದು ಸಂಶೋಧನೆಗಳಿಂದ ತಿಳಿದುಬರುತ್ತದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಈ ಸಂಬಂಧ ಪ್ರಸ್ತಾವನೆಯನ್ನು ಸಲ್ಲಿಸಿ, ನಗರಪ್ರದೇಶಗಳಲ್ಲಿ ಘನತ್ಯಾಜ್ಯ, ಒಣಗಿದ ಮರಗಿಡಗಳ ರೆಂಬೆ ಮತ್ತು ಎಲೆಗಳು ಹಾಗೂ ಇತರೆ ತ್ಯಾಜ್ಯವಸ್ತುಗಳನ್ನು ತೆರೆದ ಜಾಗದಲ್ಲಿ ಸುಡುವುದರಿಂದ ಗಾಳಿಯಲ್ಲಿ ತೇಲಾಡುವ ಕಣಗಳ ಸಾಂದ್ರತೆ ಹೆಚ್ಚಾಗುತ್ತಿದ್ದು, ಇದರಿಂದ ಜನಸಾಮಾನ್ಯರ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳನ್ನು ತಪ್ಪಿಸಲು, ವಾಯು (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ, 1981 ರ ಕಲಂ 19 (5)ರ ಅನುಸಾರ ನಗರ ಪ್ರದೇಶಗಳ ತೆರೆದ ಜಾಗದಲ್ಲಿ ತ್ಯಾಜ್ಯಗಳನ್ನು ಸುಡುವುದನ್ನು ಸಂಪೂರ್ಣವಾಗಿ ನಿಷೇಧಿಸಿ ಅಧಿಸೂಚನೆ ಹೊರಡಿಸುವಂತೆ ಶಿಫಾರಸ್ಸು ಮಾಡಿರುತ್ತದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಸ್ತಾವನೆಯನ್ನು ಪರಿಗಣಿಸಿ, ರಾಜ್ಯ ಸರ್ಕಾರವು ವಾಯು (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ, 1981 ರ ಕಲಂ 19(5)ರ ಅಡಿಯಲ್ಲಿ ತಮಗೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಬೃಹತ್ ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯನ್ನು ಸೇರಿದಂತೆ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಹಾಗೂ ರಾಜ್ಯಾದ್ಯಂತ ಇರುವ ಘನತ್ಯಾಜ್ಯ ಭೂಭರ್ತಿ ಘಟಕಗಳಲ್ಲಿನ ತೆರೆದ ಜಾಗದಲ್ಲಿ ಮರಗಿಡಗಳ ರೆಂಬೆ ಮತ್ತು ಎಲೆಗಳೂ ಸೇರಿದಂತೆ ಯಾವುದೇ ರೀತಿಯ ಘನತ್ಯಾಜ್ಯಗಳನ್ನು ಸುಡುವುದನ್ನು ಈ ಮೂಲಕ ಸಂಪೂರ್ಣವಾಗಿ ನಿಷೇಧಿಸಿದೆ.

Sec. Home

..S., K.S.P.C.B.

ಈ ಅಧಿಸೂಚನೆಯ ಉಲ್ಲಂಘನೆಯನ್ನು ವಾಯು (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ, 1981ರ ಉಲ್ಲಂಘನೆಯೆಂದು ಪರಿಗಣಿಸಿ ಸಕ್ಷಮ ಪ್ರಾಧಿಕಾರ ಕಾನೂನು ಕ್ರಮ ಜರುಗಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

3/8/2017

**(ಹೆಚ್.ಸಿ. ರಾಜೇಂದ್ರ ಕುಮಾರ್)**
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
(ಜೀವಿಪರಿಸ್ಥಿತಿ ಮತ್ತು ಪರಿಸರ)
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.

14/8

M 87/12
18/8/17
EO-3
AAK
upload in our website &
issue memo to RO
follow up
18/8

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ – ಇವರಿಗೆ ಇಂದಿನ ಸಂಚಿಕೆಯಲ್ಲಿ ಪ್ರಕಟಿಸಿ ಅದರ 200 ಪ್ರತಿಗಳನ್ನು ಇಲಾಖೆಯ ಉಪಯೋಗಕ್ಕಾಗಿ ಒದಗಿಸುವಂತೆ ಕೋರಿದೆ.

..2

ಪ್ರತಿಯನ್ನು:

1. ಮಹಾಲೇಖಪಾಲರು (ಕರ್ನಾಟಕ), ಬೆಂಗಳೂರು.
2. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
3. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಪರಿಸರ ಮಂಡಳಿ, "ಪರಿಸರ ಭವನ" 1 ರಿಂದ 5ನೇ ಮಹಡಿ, ಚರ್ಚ್ ಸ್ಟ್ರೀಟ್, ಬೆಂಗಳೂರು-560 001.
4. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.
5. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
6. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
7. ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು.
8. ಎಲ್ಲಾ ಸ್ಥಳೀಯ ಸಂಸ್ಥೆಗಳ ಆಯುಕ್ತರು/ಮುಖ್ಯಾಧಿಕಾರಿಗಳು.
9. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
10. ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರ ಹಿರಿಯ ಆಪ್ತ ಕಾರ್ಯದರ್ಶಿ
12. ಸರ್ಕಾರದ ಕಾರ್ಯದರ್ಶಿಗಳು (ಪರಿಸರ ಮತ್ತು ಜೀವಿಶಾಸ್ತ್ರ), ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರ ಹಿರಿಯ ಆಪ್ತ ಕಾರ್ಯದರ್ಶಿ.
13. ಹೆಚ್ಚುವರಿ ಪ್ರತಿಗಳು / ಶಾಖಾ ರಕ್ಷಾ ಕಡತಕ್ಕೆ. .